**ವ್ಯಾಖ್ಯಾನ**

# <u>ತಂಬೂರಿ ಮೀಟಿದವ ವೈಕುಂಠಕೆ ಓಡಿದವ</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 63.

**ಉಗಾಭೋಗದ ಚಿಂತನೆ:**

**ತಂಬೂರಿ ಮೀಟಿದವ ಭವಾಬ್ಧಿ ದಾಟಿದವ**

**ತಾಳವ ತಟ್ಟಿದವ, ಸುರರೊಳು ಸೇರಿದವ,**

**ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ**

**ಗಾಯನ ಪಾಡಿದವ ಹರಿಮೂರ್ತಿ ನೋಡಿದವ**

**ಪುರಂದರವಿಠಲನ ನೋಡಿದವ ವೈಕುಂಠಕೆ ಓಡಿದವ ॥**

ಇಲ್ಲಿ ಪುರಂದರದಾಸರು ದಾಸರು ಭಜನೆಗೆ ಬಳಸುವ ಒಂದೊಂದು ವಸ್ತುಗಳ ಫಲಶ್ರುತಿಯನ್ನು ಹೇಳಿರುವರು. ಅದಕ್ಕೆ 'ಭಜಿಸಿ ಬದುಕೆಲೊ ಮಾನವ' ಎಂದರು. ಒಂದು ಕಡೆ 'ನಿನ್ನ ಧ್ಯಾನವ ಕೊಡು ಎನ್ನ ಧನ್ಯನ ಮಾಡು' ಎಂದದ್ದು ಭಜಿಸುವಂತೆ ಮಾಡೆಂದು ಹೇಳಲು. ಸಾಮೂಹಿಕ ಭಜನೆಗೆ ನಾಂದಿಹಾಕಿದ ದಾಸರು, 'ತಾಳದಂಡಿಗೆ ಗೀತವಾದ್ಯ ಸಮ್ಮೇಳನದಿ ಊಳಿಗವನ್ನು ಮಾಳ್ಪ ಹರಿದಾಸರ ಕಂಡೆ' ಎಂದು ಕಂಡದ್ದನ್ನು ತಿಳಿಸಿದರು. ಭಜನೆಗೆ ಎಲ್ಲ ವಾದ್ಯಗಳೂ ಬೇಕು. ಆದರೆ ಭಕ್ತಿ ಎಂಬುದಿಲ್ಲದೆ ಬೇರೇನಿದ್ದರೂ ವ್ಯರ್ಥ ಎನ್ನುವರು. 'ತಾಳ–ಮೇಳಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ ಹರಿ ತಾಳನೋ' ಎಂದು ಎಚ್ಚರಿಸಿದರು.

ಭಗವದ್ಭಕ್ತರು ಸಾಮೂಹಿಕವಾಗಿ ತಾಳ ತಂಬೂರಿ ಗೆಜ್ಜೆ ಮೊದಲಾದ ವಾದ್ಯಗಳಿಂದ, ಗಾಯನ ನರ್ತನ ಮೊದಲಾದ ಕ್ರಿಯೆಗಳಿಂದ ಕೂಡಿದ, ಹರಿಪ್ರೀತಿಕರವಾದ ಕೀರ್ತನೆಯನ್ನು ಭಜನೆ ಎಂದರು. ಈ ಪರಿಕಲ್ಪನೆಯನ್ನು ಸಜ್ಜನ ವೃಂದಕ್ಕೆ ಕೊಟ್ಟವರು ಶ್ರೀಪುರಂದರದಾಸರು. ಈ ಪದ್ಧತಿಯು ಇಂದಿಗೂ ಇರುವುದು ಎಲ್ಲರ ಭಾಗ್ಯ. ಯಾಯವಾರ ಭಜನೆಯ ಒಂದು ಅಂಗ. ತಾರತಮ್ಯದಿ ಗಾನ ಮಾಡುತ್ತ

ಅರ್ಥಾನುಸಂಧಾನದಿಂದ ಭಗವಂತನನ್ನು ಭಗವದ್ಭಕ್ತರನ್ನು ಹಾಡಿ–ಪಾಡಿ, ನಲಿದು–ನರ್ತಿಸಿ, ಶ್ರೀಹರಿಯನ್ನು ಪ್ರೀತಿ ಬಡಿಸಿದಲ್ಲಿ ಅಭೀಷ್ಟಸಿದ್ಧಿ ನಿಶ್ಚಿತವೆನ್ನುವರು. ಇದು ಏಕಾಂತವಾದರೆ ಧ್ಯಾನವೆನಿಸಿ, ಸಾಮೂಹಿಕ ಭಜನೆ ಎನ್ನಿಸುವುದು. ಗೆಜ್ಜೆ ಕಟ್ಟಿ ಲಜ್ಜೆಬಿಟ್ಟು ತಂಬೂರಿ ಮೀಟಿದಲ್ಲಿ ತಂಬೂರಿಯಂತಿರುವ ಈ ದೇಹವನ್ನು ಭಗವಂತನೇ ಮೀಟಿ, ಅದರಿಂದ ಬರುವ ನಾದಕ್ಕೆ ಒಲಿದು, ಈ ದೇಹವನ್ನು ಸಾಧನ ಶರೀವನ್ನಾಗಿಸಿ ಉದ್ಧರಿಸುವ.

**ಶ್ರೀ ಕೃಷ್ಣಾರ್ಪಣಮಸ್ತು**